ಇಂದು ದಿನಾಂಕಃ 20.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ನಂ.6(ಎ) ದಿಂದ (ಡಿ) ನೇದವರ ಪರ ಶ್ರೀ ಯು ಬಿ ಜೆ ವಕೀಲರಿಂದಃ

ದಾವೆಯನ್ನು ಮಾಡಲು ವಕೀಲರಿಗೆ ಮಾಹಿತಿಯನ್ನು ನಾನೇ ಮಾಡಿರುತ್ತೇನೆ. ಪ್ರತಿವಾದಿ 6 ರವರು ನಮ್ಮ ಕುಟುಂಬಕ್ಕೆ ಸೇರಿದವರಾಗಿರುವುದಿಲ್ಲ. ಮೂಲ ಪುರುಷ ಗುರುಪಾದಪ್ಪವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅಬಲೂರಪ್ಪ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನಾನು ಹಾಜರಪಡಿಸಿರುವ ವಂಶವೃಕ್ಷದಲ್ಲಿ ನನ್ನ ಅಕ್ಕ ತಂಗಿಯರನ್ನು ಸೇರಿಸಿಲ್ಲ ಎಂದರೆ ಸರಿ. ನನಗೆ ಬಸವಣ್ಣೆಪ್ಪನವರು ಚಿಕ್ಕಪ್ಪನಾಗಬೇಕು ಅವರಿಗೆ 4 ಜನ ಹೆಣ್ಣು ಮಕ್ಕಳು ಹಾಗೂ 3 ಜನ ಗಂಡು ಮಕ್ಕಳು ಇರುತ್ತಾರೆ. ಸದರಿ ಬಸವಣ್ಣೆಪ್ಪರವರ 4 ಜನ ಹೆಣ್ಣು ಮಕ್ಕಳನ್ನು ನಾನು ಹಾಜರಪಡಿಸಿರುವ ವಂಶವೃಕ್ಷದಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ಇಬ್ಬರು ಅಕ್ಕತಂಗಿಯರನ್ನು ನಾನು ಸೇರಿಸಿಲ್ಲ ಎಂದರೆ ಸರಿ. ಆ ರೀತಿ ಮೇಲೆ ಹೇಳಿದ ಹೆಣ್ಣು ಮಕ್ಕಳನ್ನು ಸೇರಿಸಿಲ್ಲದಿದ್ದ ಕಾರಣದಿಂದ ನಾನು ಹಾಜರಪಡಿಸಿರುವ ವಂಶವೃಕ್ಷವು ತಪ್ಪು ಇರುತ್ತದೆ ಎಂದರೆ ಸರಿ. ನನ್ನ ತಾಯಿ ಪೋತಿಯಾಗಿರುವ ಕಾರಣದಿಂದ ಆಕೆಯನ್ನು ನಾನು ವಂಶವೃಕ್ಷದಲ್ಲಿ ತೋರಿಸಿರುವುದಿಲ್ಲ.

2. ಈ ದಾವಾ ಆಸ್ತಿಯ ಸರ್ವೆನಂಬರಗಳನ್ನು ನನಗೆ ಹೇಳಲು ಆಗುವುದಿಲ್ಲ. ಆರೀಕಟ್ಟಿ ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಒಂದು ಮನೆಯನ್ನು ಹೊರುತಪಡಿಸಿ ಬೇರೆ ಯಾವುದೇ ಜಮೀನು ಇರುವುದಿಲ್ಲ. ದಾವಾ ಶೆಡ್ಯೂಲ್-1 ಮತ್ತು 2 ಆಸ್ತಿಗಳಲ್ಲಿ ನಾವು ಯಾವತ್ತೂ ವಹಿವಾಟು ಮಾಡದಿದ್ದ ಕಾರಣದಿಂದ ಅವುಗಳ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸದರಿ ಆಸ್ತಿಗಳು 4 ಎಕರೆ 4 ಗುಂಟೆ ಜಮೀನು ಇರುತ್ತದೆ. ದಾವಾ ಆಸ್ತಿಗಳ ಚಕ್ಕಬಂದಿ ನನಗೆ ಹೇಳಲು ಆಗುವುದಿಲ್ಲ. 5 ನೇ ಪ್ರತಿವಾದಿಗೂ ನಮಗೂ ಯಾವುದೇ ಸಂಬಂದ ಇರುವುದಿಲ್ಲ. ಸರ್ವೆನಂ.42/6 ರ ಆಸ್ತಿಯ ಮೇಲೆ 5 ನೇ ಪ್ರತಿವಾದಿ ಹಾಗೂ ಅವರ ಸಹೋದರರು ನನ್ನ ತಂದೆ ಹಾಗೂ ನಮ್ಮ ಚಿಕ್ಕಪ್ಪನ ವಿರುದ್ದ ದಾವೆಯನ್ನು ಹೂಡಿದ್ದರು ಎಂದರೆ ಸರಿ.

3. ನನ್ನ ಚಿಕ್ಕಪ್ಪನ ಮಗನಾದ ಮೌನೇಶಪ್ಪನ ವಿರುದ್ದವು ಕೂಡ 5 ನೇ ಪ್ರತಿವಾದಿ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಈ ದಾವೆಯ 6 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ನಾನು ಆಗ ಸಣ್ಣವನಾಗಿದ್ದೆ.

(ಈ ಹಂತದಲ್ಲಿ ವಾದಿ ಪಾರ್ಟೀ ಸವಾಲಿಗೆ ಒಳಪಡಲು ಸಮಯಾವಕಾಶ ಕೋರಿದ್ದು ಅದರಂತೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.